# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರತಿಷ್ಠಿತ ಶಾಲೆಗಳಲ್ಲಿ ಹಿಂದುಳಿದ ವರ್ಗಗಳ ಅಲೆಮಾರಿ/ಅರೆಅಲೆಮಾರಿ ಜನಾಂಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕಲ್ಪಿಸುವ ಬಗ್ಗೆ ಪರಿಷ್ಕೃತ ಆದೇಶ.

ಓದಲಾಗಿದೆ:
1. ಸರ್ಕಾರ ಆದೇಶ ಸಂ:ಸಕಇ 234 ಬಿಎಂಎಸ್2007, ದಿನಾಂಕ: 21.09.2007.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:26-05-2012 ರಂದು ನಡೆದ ಸಭೆಯ ತೀರ್ಮಾನ.
3. ಸರ್ಕಾರ ಆದೇಶ ಸಂ: ಬಿಸಿಡಬ್ಲ್ಯೂ 135 ಬಿಎಂಎಸ್ 2013, ದಿನಾಂಕ: 21.02.2013
4. ಸರ್ಕಾರ ಆದೇಶ ಸಂ: ಸಕಇ 62 ಪಕವಿ 2013 ದಿನಾಂಕ: 12.06.2013.

********

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ:(1)ರಲ್ಲಿ ಅಲೆಮಾರಿ/ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಾದ ಶ್ರೀ ರಾಮಕೃಷ್ಣ ವಿದ್ಯಾಶಾಲೆ, ಮೈಸೂರು ಹಾಗೂ ಜನಸೇವಾ ವಿದ್ಯಾ ಕೇಂದ್ರ, ಬೆಂಗಳೂರು ಮಾದರಿಯಲ್ಲಿ ಇತರೆ ಪ್ರತಿಷ್ಠಿತ ಶಾಲೆಗಳಲ್ಲೂ ಪ್ರವೇಶಾವಕಾಶ ಕಲ್ಪಿಸಿ, ಮಾರ್ಗಸೂಚಿಗಳೊಂದಿಗೆ ಆದೇಶಿಸಲಾಗಿದೆ. ಆದರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಆರಂಭಗೊಂಡಿರುವ ಕಾರಣ ಹಾಗೂ ಸಮಾಜ ಕಲ್ಯಾಣ ಇಲಾಖೆಯಲ್ಲಿ ಈ ಯೋಜನೆಯನ್ನು ಸ್ಥಗಿತಪಡಿಸಿದ ಕಾರಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ(3) ರಲ್ಲಿ ಪ್ರತಿಷ್ಠಿತ ಶಾಲೆಗಳಲ್ಲಿ ಹೊಸದಾಗಿ ಪ್ರವೇಶ ನೀಡುವ ಈ ಕಾರ್ಯಕ್ರಮವನ್ನು ಸ್ಥಗಿತಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಈ ಯೋಜನೆಯನ್ನು ಪುನರಾರಂಭಿಸಿರುವ ಕಾರಣ, ಪ್ರತಿಷ್ಠಿತ ಶಾಲೆಗಳು ಹಾಗೂ ಅಲೆಮಾರಿ / ಅರೆ ಅಲೆಮಾರಿ ಸಮುದಾಯದವರು ಈ ಯೋಜನೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲೂ ಸಹ ಮುಂದುವರಿಸಬೇಕೆಂದು ಮನವಿ ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ದಿನಾಂಕ:26-05-2012 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಪ್ರತಿಷ್ಠಿತ ಶಾಲೆಗಳ ಮುಖ್ಯಸ್ಥರೊಂದಿಗೆ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಅಲೆಮಾರಿ/ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಹೊಸ ಪ್ರವೇಶ ನೀಡಲು ಅವಕಾಶ ಕಲ್ಪಿಸಿದ ಪ್ರತಿಷ್ಠಿತ ಶಾಲೆಗಳಿಗೆ ಆ ಸಭೆಯಲ್ಲಿ ನಿಗದಿಪಡಿಸಿದ ಶುಲ್ಕದಂತೆ, 2013-14ನೇ ಸಾಲಿನಿಂದ ಹಾಗೂ ಮುಂದಿನ ಆದೇಶದವರೆಗೆ, 6ನೇ ತರಗತಿಗೆ ಪ್ರವೇಶ ಕಲ್ಪಿಸಲು ಸರ್ಕಾರ ತೀರ್ಮಾನಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂ.ಹಿಂವಕ 424 ಬಿಎಂಎಸ್ 2013, ಬೆಂಗಳೂರು, ದಿನಾಂಕ. 17-07-2013**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಿಂದುಳಿದ ವರ್ಗಗಳ ಅಲೆಮಾರಿ/ಅರೆಅಲೆಮಾರಿ ಜನಾಂಗದ ಅರ್ಹ ವಿದ್ಯಾರ್ಥಿಗಳಿಗೆ, ಅನುಬಂಧ-1ರ ಕಾಲಂ(2)ರಲ್ಲಿ ನೀಡಲಾಗಿರುವ ಸಂಸ್ಥೆಗಳಿಗೆ ಅವುಗಳ ಎದುರಿಗೆ

ಕಾಲಂ (3)ರಲ್ಲಿ ನಿಗದಿಪಡಿಸಿರುವ ದರಗಳಂತೆ, ಹಾಗೂ ಕಾಲಂ (4)ರಲ್ಲಿ ನಿಗದಿಪಡಿಸಿರುವ ಗರಿಷ್ಠ ಸಂಖ್ಯೆಗೆ ಒಳಪಟ್ಟು, 2013-14ನೇ ಸಾಲಿನಿಂದ 6ನೇ ತರಗತಿಗೆ ಪ್ರವೇಶವಕಾಶ ಕಲ್ಪಿಸಲು, ಈ ಕೆಳಗಿನ ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ.

ಷರತ್ತುಗಳು:

1. ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳ **ಅಲೆಮಾರಿ/ಅರೆಅಲೆಮಾರಿ** ಜಾತಿಗಳಿಗೆ ಸೇರಿರತಕ್ಕದ್ದು.
(ಸರ್ಕಾರದ ಆದೇಶ ಸಂ.ಪಿಹೆಚ್ಎಸ್ 262 ಎಸ್ಇಡಬ್ಲ್ಯೂ 65, ಬೆಂಗಳೂರು, ದಿನಾಂಕ 1.2.1966 ರಲ್ಲಿ ಇರುವಂತೆ)

2. ಆದಾಯ ಮಿತಿ: ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.1.00 ಲಕ್ಷದೊಳಗಿರಬೇಕು.

3. ಪ್ರತಿಷ್ಠಿತ ಶಾಲೆಯನ್ನು ಗುರುತಿಸುವ ವಿಧಾನ:

    1. ಆ ಶಾಲೆ ಕನ್ನಡ / ಆಂಗ್ಲ ಮಾಧ್ಯಮದ್ದಾಗಿರಬೇಕು.
    2. ವಸತಿ ಸೌಕರ್ಯ ಇರುವ ಶಾಲೆಗಳಿಗೆ ಆದ್ಯತೆ ನೀಡಬೇಕು.
    3. ಆ ಶಾಲೆಯಲ್ಲಿ ಪ್ರತಿ ವರ್ಷ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನಿಷ್ಠ ಶೇ.80 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿರಬೇಕು.
    4. ಆ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳು ಇರಬೇಕು.
    5. ವಸತಿ ಶಾಲೆಯಲ್ಲಿ ಸೂಕ್ತ ವಸತಿ, ಭೋಜನಾ, ಸಮವಸ್ತ್ರ, ಪಠ್ಯ-ಪುಸ್ತಕ, ಪ್ರವಾಸ, ಹಾಗೂ ಇತರೆ ಸೌಲಭ್ಯಗಳನ್ನು, ಇತರೆ ವಿದ್ಯಾರ್ಥಿಗಳಿಗೆ ಒದಗಿಸುವಂತೆ, ಈ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೂ ಸಹ ಒದಗಿಸಬೇಕು.
    6. ವಿದ್ಯಾರ್ಥಿಗಳಿಂದ ಅಥವಾ ಅವರ ತಂದೆ/ತಾಯಿ/ಪೋಷಕರಿಂದ ಹೆಚ್ಚುವರಿ ಶುಲ್ಕಗಳನ್ನು ಶಾಲೆಗಳು ವಸೂಲಿ ಮಾಡತಕ್ಕದ್ದಲ್ಲ.
    7. ಈ ಸಂಬಂಧ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ, **ಅನುಬಂಧ-2ರಲ್ಲಿ** ಇರುವಂತೆ ರೂ.50/- ಛಾಪಾ ಕಾಗದದಲ್ಲಿ ಶಾಲೆಯ ಮುಖ್ಯಸ್ಥರು ಲಿಖಿತ ಮುಚ್ಚಳಿಕೆ ಪತ್ರವನ್ನು ಸಲ್ಲಿಸಬೇಕು.
    8. ವಿದ್ಯಾರ್ಥಿಗಳನ್ನು 6ನೇ ತರಗತಿಗೆ ಮಾತ್ರ ದಾಖಲಿಸಿ ಅದೇ ಶಾಲೆಯಲ್ಲಿ 10ನೇ ತರಗತಿಯವರೆಗೆ ಮುಂದುವರೆಸಬೇಕು. (ಒಂದು ವೇಳೆ, ವಿದ್ಯಾರ್ಥಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ನಡೆಸುವ ವಸತಿಶಾಲೆಯಲ್ಲಿ ಪ್ರವೇಶ ದೊರೆತಲ್ಲಿ, ಆ ವಿದ್ಯಾರ್ಥಿ ಆ ಸಂಸ್ಥೆಯಲ್ಲಿ ವ್ಯಾಸಂಗ ಮಾಡಲು ಅವಕಾಶವಿರುತ್ತದೆ.)
    9. ಈ ಹಿಂದೆ ಅನುಮತಿಯೊಂದಿಗೆ ದಾಖಲುಗೊಂಡ ವಿದ್ಯಾರ್ಥಿಗಳು, ಅವರು 10ನೇ ತರಗತಿ ಪೂರ್ಣಗೊಳಿಸುವವರೆಗೆ ಆ ಶಾಲೆಯಲ್ಲಿ ಮುಂದುವರೆಸಬೇಕು. (ಒಂದು ವೇಳೆ, ವಿದ್ಯಾರ್ಥಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ನಡೆಸುವ ವಸತಿಶಾಲೆಯಲ್ಲಿ ಪ್ರವೇಶ ದೊರೆತಲ್ಲಿ, ಆ ವಿದ್ಯಾರ್ಥಿ ಆ ಸಂಸ್ಥೆಯಲ್ಲಿ ವ್ಯಾಸಂಗ ಮಾಡಲು ಅವಕಾಶವಿರುತ್ತದೆ.)

10. ದಾಖಲುಗೊಂಡ ವಿದ್ಯಾರ್ಥಿಗಳ ಪ್ರಗತಿ ಪತ್ರ ಹಾಗೂ ಫಲಿತಾಂಶವನ್ನು ಆಯಾ ಶಾಲೆಯ ಮುಖ್ಯಸ್ಥರು, ಸಂಬಂಧಿಸಿದ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳಿಗೆ ಕಾಲ ಕಾಲಕ್ಕೆ ನೀಡಬೇಕು.

11. ಒಂದು ವೇಳೆ, ಶಾಲೆಯು ನಿಗದಿಪಡಿಸಿದ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ, ಆ ಶಾಲೆಗೆ ನೀಡುವ ಸೌಲಭ್ಯಗಳನ್ನು ಕೂಡಲೇ ಹಿಂತೆಗೆದುಕೊಳ್ಳಲಾಗುವುದು.

5. **ಪ್ರತಿಷ್ಠಿತ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಆಯ್ಕೆ ವಿಧಾನ:**

1) ಜಿಲ್ಲೆಯ ಜಿಲ್ಲಾಧಿಕಾರಿಗಳ ಅನುಮತಿಯೊಂದಿಗೆ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು, ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಿ, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಬೇಕು.

2) ಅರ್ಜಿಗಳನ್ನು ಸ್ವೀಕರಿಸಿದ ಬಳಿಕ ಸಂಸ್ಥೆವಾರು **ಅನುಬಂಧ-1ರಲ್ಲಿ** ನಿಗದಿಪಡಿಸಿರುವ ಗುರಿಗಳಿಗೆ ಅನುಗುಣವಾಗಿ ಅರ್ಹ ವಿದ್ಯಾರ್ಥಿಗಳನ್ನು ಲಾಟರಿ ಮುಖಾಂತರ, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಆಯ್ಕೆ ಮಾಡಬೇಕು. **ಈ ಪ್ರಕ್ರಿಯೆಯನ್ನು ಆಯಾ ವರ್ಷದ ಮೇ ಅಂತ್ಯದೊಳಗಾಗಿ ಮಾಡಬೇಕು.**

3) ಒಂದು ಕುಟುಂಬದಲ್ಲಿ ಎರಡು ಮಕ್ಕಳಿಗೆ ಮಾತ್ರ, ಅಂದರೆ ಒಬ್ಬ ಬಾಲಕ ಮತ್ತು ಒಬ್ಬ ಬಾಲಕಿಗೆ ಅವಕಾಶ ಕಲ್ಪಿಸಬಹುದು. ಬಾಲಕ ಇಲ್ಲದಿದ್ದಲ್ಲಿ, ಆ ಕುಟುಂಬದ ಇಬ್ಬರು ಬಾಲಕಿಯರಿಗೆ ಅವಕಾಶ ನೀಡಬಹುದು.

4) ಅರ್ಹ ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ಅನುಮೋದನೆಗಾಗಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಜಿಲ್ಲಾಧಿಕಾರಿಗಳ ಮೂಲಕ ಆಯ್ಕೆ ಪ್ರಕ್ರಿಯೆಯ ನಡವಳಿಯೊಂದಿಗೆ ಸಲ್ಲಿಸಬೇಕು.

5) 6ನೇ ತರಗತಿಯನ್ನು ಹೊರತುಪಡಿಸಿ, ಉಳಿದ ಯಾವುದೇ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಿಸಬಾರದು.

6) ಒಟ್ಟು ವಿದ್ಯಾರ್ಥಿಗಳಲ್ಲಿ ಕನಿಷ್ಠ ಶೇ.50 ರಷ್ಟು ಗ್ರಾಮೀಣ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಬೇಕು.

7) ಬಾಲಕಿಯರಿಗೆ ಕನಿಷ್ಠ ಶೇ.50 ರಷ್ಟು ಮೀಸಲಾತಿಯನ್ನು ನೀಡಬೇಕು.

6. **ಇತರೆ ಷರತ್ತುಗಳು:**

1. ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು ಕಾಲಕಾಲಕ್ಕೆ ಪ್ರತಿಷ್ಠಿತ ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಪ್ರಗತಿಯ ಕುರಿತು ಪರಿಶೀಲಿಸಿ, ವರದಿಯನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರಿಗೆ ಸಲ್ಲಿಸಬೇಕು.

2. ಈ ಸಂಬಂಧ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, **ಅನುಬಂಧ-2ರಲ್ಲಿ** ಇರುವಂತೆ ರೂ.50/- ಛಾಪಾ ಕಾಗದದಲ್ಲಿ ಶಾಲೆಯ ಮುಖ್ಯಸ್ಥರ ಲಿಖಿತ ಮುಚ್ಚಳಿಕೆ ಪತ್ರವನ್ನು ಪಡೆಯಬೇಕು.

74

3. ವಿದ್ಯಾರ್ಥಿಗಳಿಗೆ ಪಾವತಿಸಬೇಕಾದ ಶುಲ್ಕವನ್ನು ಆಯಾ ಶಾಲೆಗೆ ವಿದ್ಯಾರ್ಥಿಗಳ ಪ್ರಗತಿಯನ್ನು ಆಧರಿಸಿ, ಜಿಲ್ಲಾಧಿಕಾರಿಗಳು, ವಾರ್ಷಿಕವಾಗಿ ಎರಡು ಕಂತುಗಳಲ್ಲಿ ಪಾವತಿಸಬೇಕು.

ಇದಕ್ಕೆ ತಗಲುವ ವೆಚ್ಚವನ್ನು ರಾಜ್ಯವಲಯ ಯೋಜನೆ – ತೀವ್ರ ಹಿಂದುಳಿದ ವರ್ಗಗಳು ಮತ್ತು ಅರೆ ಅಲೆಮಾರಿ ಜನಾಂಗಗಳಿಗೆ ಸಹಾಯ ಲೆಕ್ಕಶೀರ್ಷಿಕೆ: 2225–03–102–0–12 ರಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 1996 ದಿನಾಂಕ:10/07/1996 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಚಿಕ್ಕೇಗೌಡ)
ಸರ್ಕಾರದ ಉಪ ಕಾರ್ಯದರ್ಶಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಗೆ,

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ), ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
5) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
6) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
7) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
8) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
9) ಎಲ್ಲಾ ಜಿಲ್ಲಾಧಿಕಾರಿಗಳು (ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ–ಇವರ ಮುಖಾಂತರ)
10) ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು, (ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮೂಲಕ)
11) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
12) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
13) ಸರ್ಕಾರದ ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
14) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಅನುಬಂಧ-1

ಸರ್ಕಾರದ ಆದೇಶ ಸಂ.ಹಿಂವಕ 424 ಬಿಎಂಎಸ್ 2013, ಬೆಂಗಳೂರು, ದಿನಾಂಕ. 17-07-2013ರ ಪ್ರಕಾರ ಪ್ರತಿಷ್ಠಿತ ಶಾಲೆಗಳಿಗೆ ನಿಗದಿಪಡಿಸಿದ ವಾರ್ಷಿಕ ಶುಲ್ಕ ಹಾಗೂ ಹೊಸ ಪ್ರವೇಶಕ್ಕಾಗಿ ಗರಿಷ್ಠ ಗುರಿ

| ಕ್ರ ಸಂ. | ಶಾಲೆಯ ಹೆಸರು | ಪ್ರತಿ ವಿದ್ಯಾರ್ಥಿಗೆ ವಾರ್ಷಿಕವಾಗಿ ನಿಗದಿಪಡಿಸಿರುವ ಶುಲ್ಕ | ಹೊಸ ಪ್ರವೇಶಕ್ಕಾಗಿ ನಿಗದಿಪಡಿಸಿದ ಗರಿಷ್ಠ ಗುರಿ |
|---|---|---|---|
| 1 | ನವೋದಯ ಕಿಶೋರ ಕೇಂದ್ರ, ವರದರಾಜಸ್ವಾಮಿ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು ನಗರ ಜಿಲ್ಲೆ | ರೂ.30,000 | 50 |
| 2 | ಎಸ್.ಇ.ಎ. ಪ್ರೈಮರಿ ಮತ್ತು ಹೈಯರ್ ಸೆಕಂಡರಿ ಶಾಲೆ, ಬಸವನಪುರ, ಬೆಂಗಳೂರು ನಗರ ಜಿಲ್ಲೆ | 6 ಮತ್ತು 7ನೇ ತರಗತಿಗೆ ರೂ.12,000<br>8 ರಿಂದ 10ನೇ ತರಗತಿವರೆಗೆ ರೂ.15,000 | 25 |
| 3 | ವೇಣು ವಿದ್ಯಾ ಸಂಸ್ಥೆ, ಉನಕಿಲಿ, ಶ್ರೀನಿವಾಸಪುರ, ಕೋಲಾರ ಜಿಲ್ಲೆ | ರೂ.25,000 | 25 |
| 4 | ಶ್ರೀ ಭೈರವೇಶ್ವರ ವಿದ್ಯಾನಿಕೇತನ, ಬೈರಪಲ್ಲಿ, ಶ್ರೀನಿವಾಸಪುರ, ಕೋಲಾರ ಜಿಲ್ಲೆ | ರೂ.30,000 | 25 |
| 5 | ನಾಯಕ ಸ್ಟೂಡೆಂಟ್ ಫೆಡರೇಶನ್ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಗೋಕಾಕ್, ಬೆಳಗಾವಿ ಜಿಲ್ಲೆ | 6 ಮತ್ತು 7ನೇ ತರಗತಿಗೆ ರೂ.13,000<br>8 ರಿಂದ 10ನೇ ತರಗತಿವರೆಗೆ ರೂ.15,000 | 25 |
| 6 | ಐ.ಎನ್.ಎ. ರಾಮರಾವ್ ಸೈನಿಕ ಶಾಲೆ, ತಾರಿಹಾಳ, ಧಾರವಾಡ ಜಿಲ್ಲೆ | ರೂ.30,000 | 25 |
| 7 | ಸ್ವಾಮಿ ವಿವೇಕಾನಂದ ಪ್ರೌಢಶಾಲೆ, ಜಮಖಂಡಿ, ಬಾಗಲಕೋಟೆ ಜಿಲ್ಲೆ. | ರೂ.5,000 | 25 |
| 8 | ಬಸವೇಶ್ವರ ಪ್ರಾಥಮಿಕ ಶಾಲೆ, ಬಾಗಲಕೋಟೆ ಜಿಲ್ಲೆ | ರೂ.5,000 | 25 |
| 9 | ಲೊಯೋಲಾ ಮಾಧ್ಯಮಿಕ ಶಾಲೆ, ಮುಂಡಗೋಡ, ಉತ್ತರ ಕನ್ನಡ ಜಿಲ್ಲೆ. | ರೂ.10,000 | 25 |
| 10 | ಶಿವಾನಂದ ಶಿವಯೋಗಿ ಗ್ರಾಮೀಣ ಜನ ಕಲ್ಯಾಣ ಸಂಸ್ಥೆ, ಜೇವರ್ಗಿ, ಗುಲ್ಬರ್ಗಾ ಜಿಲ್ಲೆ | ರೂ.40,000 | 25 |
| 11 | ವಿವೇಕಾನಂದ ವಿದ್ಯಾಪೀಠ, ತಾಡತೇಗನೂರು, ಗುಲ್ಬರ್ಗಾ ಜಿಲ್ಲೆ | ರೂ.40,000 | 150 * |
| 12 | ಕನಕದಾಸ ಸಾರ್ವಜನಿಕ ಪ್ರೌಢಶಾಲೆ, ನಂಜನಗೂಡು, ಮೈಸೂರು ಜಿಲ್ಲೆ | ರೂ.5,000 | 25 |
| 13 | ವಿವೇಕಾನಂದ ಹೆಚ್.ಪಿ.ಎಸ್. ಹನೂರು, ಚಾಮರಾಜನಗರ ಜಿಲ್ಲೆ | ರೂ.10,000 | 25 |
| 14 | ಎಸ್.ಡಿ.ಎ. ಇಂಗ್ಲೀಷ್ ಹೈಸ್ಕೂಲ್ ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ | ರೂ.10,000 | 25 |
| | ಒಟ್ಟು | | 500 |

* ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಕೊಪ್ಪಳ, ಬಿಜಾಪುರ, ಯಾದಗಿರಿ ಮತ್ತು ಬೀದರ್ ಜಿಲ್ಲೆಗಳಿಗೆ ಸಂಬಂಧಿಸಿದಂತೆ

(ಚಿಕ್ಕೇಗೌಡ)
ಸರ್ಕಾರದ ಉಪ ಕಾರ್ಯದರ್ಶಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಅನುಬಂಧ–2

## "ಮುಚ್ಚಳಿಕೆ ಪತ್ರ"

ಪ್ರಾಂಶುಪಾಲರು/ಮುಖ್ಯಸ್ಥರು . . . . . . . . . . . . . . . . ಶಾಲೆ ಆದ ನಾನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು, . . . . . . . . . . . . . . . . . ಜಿಲ್ಲೆ ಇವರಿಗೆ ಈ ಕೆಳಗಿನ ನಿಬಂಧನೆಗಳನ್ನು ಒಪ್ಪಿ ಬರೆದುಕೊಟ್ಟ ಮುಚ್ಚಳಿಕೆ ಪ್ರಮಾಣ ಪತ್ರ.

1. ಅಲೆಮಾರಿ/ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಸಲುವಾಗಿ ನಮ್ಮ ಸಂಸ್ಥೆಗೆ ಒಬ್ಬ ವಿದ್ಯಾರ್ಥಿಗೆ ವಾರ್ಷಿಕವಾಗಿ ಸರ್ಕಾರ ನಿಗದಿಪಡಿಸಿದ ರೂ. . . . . . . . . ಗಳ ಶುಲ್ಕದಲ್ಲಿ ಶಿಕ್ಷಣವನ್ನು ನೀಡಲು ನಾವು ಬದ್ಧರಿರುತ್ತೇವೆ.

2. ನವೀಕರಣ ಮತ್ತು ಪ್ರವೇಶ ಪಡೆದ ಹೊಸ ವಿದ್ಯಾರ್ಥಿಗಳು ನಮ್ಮ ಸಂಸ್ಥೆಯಲ್ಲಿ ಶಿಕ್ಷಣವನ್ನು ಮುಕ್ತಾಯಗೊಳಿಸುವ ತನಕ ಇದೇ ಶುಲ್ಕವನ್ನು ಪಡೆಯಲು ನಾವು ಒಪ್ಪಿರುತ್ತೇವೆ.

3. ವಿದ್ಯಾರ್ಥಿಗಳಿಂದ ಅಥವಾ ಅವರ ತಂದೆ/ತಾಯಿ/ಪೋಷಕರಿಂದ ಹೆಚ್ಚುವರಿ ಶುಲ್ಕವನ್ನು ನಾವು ವಸೂಲಿ ಮಾಡುವುದಿಲ್ಲ.

4. ನಮ್ಮ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿರುವ ನವೀಕರಣ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ನಾವು ಸಂಪೂರ್ಣವಾಗಿ ಶ್ರಮಿಸುತ್ತೇವೆ. ಈ ವಿದ್ಯಾರ್ಥಿಗಳು ಹಾಗೂ ಇತರೆ ವಿದ್ಯಾರ್ಥಿಗಳ ನಡುವೆ ಯಾವುದೇ ತಾರತಮ್ಯ ಮಾಡುವುದಿಲ್ಲ.

5. ಈ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು.

6. ವಿದ್ಯಾರ್ಥಿಗಳು ಅರ್ಧದಲ್ಲಿ ಶಾಲೆ ಬಿಡದಂತೆ ನೋಡಿಕೊಳ್ಳುತ್ತೇವೆ.

7. ಸರ್ಕಾರ ಕಾಲಕಾಲಕ್ಕೆ ಈ ಸಂಬಂಧ ಹೊರಡಿಸುವ ಸೂಚನೆಗಳನ್ನು ಪಾಲಿಸುತ್ತೇವೆ.

8. ನಮ್ಮ ಶಾಲೆ ಕನ್ನಡ / ಆಂಗ್ಲ ಮಾಧ್ಯಮದ್ದಾಗಿರುತ್ತದೆ.

9. ನಮ್ಮ ಶಾಲೆಯಲ್ಲಿ ಸೂಕ್ತ ವಸತಿ, ಭೋಜನಾ, ಸಮವಸ್ತ್ರ, ಪಠ್ಯ–ಪುಸ್ತಕ, ಪ್ರವಾಸ, ಹಾಗೂ ಇತರೆ ಸೌಲಭ್ಯಗಳನ್ನು, ಇತರೆ ವಿದ್ಯಾರ್ಥಿಗಳಿಗೆ ಒದಗಿಸುವಂತೆ, ಈ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೂ ಸಹ ಒದಗಿಸಲಾಗುವುದು.

---2

10. 6ನೇ ತರಗತಿಗೆ ದಾಖಲಾದ ವಿದ್ಯಾರ್ಥಿಗಳನ್ನು 10ನೇ ತರಗತಿಯವರೆಗೆ ಮುಂದುವರೆಸಲಾಗುವುದು. (ಒಂದು ವೇಳೆ, ವಿದ್ಯಾರ್ಥಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ನಡೆಸುವ ವಸತಿಶಾಲೆಯಲ್ಲಿ ಪ್ರವೇಶ ದೊರೆತಲ್ಲಿ, ಆ ವಿದ್ಯಾರ್ಥಿ ಆ ಸಂಸ್ಥೆಯಲ್ಲಿ ವ್ಯಾಸಂಗ ಮಾಡಲು ನಮ್ಮ ಅಭ್ಯಂತರವಿರುವುದಿಲ್ಲ.)

11. ಈ ಹಿಂದೆ ಅನುಮತಿಯೊಂದಿಗೆ ದಾಖಲುಗೊಂಡ ವಿದ್ಯಾರ್ಥಿಗಳು, ಅವರು 10ನೇ ತರಗತಿ ಪೂರ್ಣಗೊಳಿಸುವವರೆಗೆ ನಮ್ಮ ಶಾಲೆಯಲ್ಲಿ ಮುಂದುವರೆಸುತ್ತೇವೆ. (ಒಂದು ವೇಳೆ, ವಿದ್ಯಾರ್ಥಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ನಡೆಸುವ ವಸತಿಶಾಲೆಯಲ್ಲಿ ಪ್ರವೇಶ ದೊರೆತಲ್ಲಿ, ಆ ವಿದ್ಯಾರ್ಥಿ ಆ ಸಂಸ್ಥೆಯಲ್ಲಿ ವ್ಯಾಸಂಗ ಮಾಡಲು ನಮ್ಮ ಅಭ್ಯಂತರವಿರುವುದಿಲ್ಲ.)

12. ದಾಖಲುಗೊಂಡ ವಿದ್ಯಾರ್ಥಿಗಳ ಪ್ರಗತಿ ಪತ್ರ ಹಾಗೂ ಫಲಿತಾಂಶವನ್ನು ನಾವು ಸಂಬಂಧಿಸಿದ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳಿಗೆ ಕಾಲ ಕಾಲಕ್ಕೆ ನೀಡುತ್ತೇವೆ.

13. ಒಂದು ವೇಳೆ, ಶಾಲೆಯು ನಿಗದಿಪಡಿಸಿಧ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ, ಈ ಶಾಲೆಗೆ ನೀಡುವ ಸೌಲಭ್ಯಗಳನ್ನು ಕೂಡಲೇ ಸರ್ಕಾರ ಹಿಂತೆಗೆದುಕೊಳ್ಳಬಹುದು.

ದಿನಾಂಕ

ಸಹಿ :
ಹೆಸರು :
(ಶಿಕ್ಷಣ ಸಂಸ್ಥೆಯ ಮುಖ್ಯಸ್ಥರ)
ಸಂಸ್ಥೆಯ ಮೊಹರು